ಓಎಸ್. 159/2022

ಡಿ. ಡಬ್ಲ್ಯೂನಂ. - 1

<u>ದಿನಾಂಕಃ 27.04.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

**<u>ಮುಖ್ಯ ವಿಚಾರಣೆ : ಪ್ರತಿವಾದಿಯ ಪರ ಎಜಿಪಿ ರವರಿಂದಃ –</u>**

ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿ ನನ್ನ ವಕೀಲರ ಮುಖಾಂತರ ಬರೆಸಿರುತ್ತೇನೆ ಹಾಗೂ ನನ್ನ ಸಹಿಯನ್ನು ಪ್ರಮಾಣ ಪತ್ರಕ್ಕೆ ಹಾಕಿರುತ್ತೇನೆ.

ದಿನಾಂಕ 10.08.2022 ರ ತಿಳುವಳಿಕೆ ಪತ್ರದ ಯಥಾ ನಕಲನ್ನು ನಿಡಿ–1 ಎಂದು, ನಿವೇದನೆಯ ಧೃಡೀಕೃತ ನಕಲನ್ನು ನಿಡಿ–2 ಎಂದು, ಎರಡು ಫೋಟೋಗಳ ಧೃಡೀಕೃತ ನಕಲುಗಳನ್ನು ಒಟ್ಟಾಗಿ ನಿಡಿ–3 ಎಂದು, ಮೋಜನಿ ನಕ್ಷೆಯ ಧೃಡೀಕೃತ ನಕಲನ್ನು ನಿಡಿ–4 ಎಂದು, ಮ್ಯೂಟೇಶನ್ ನ ಧೃಡೀಕೃತ ನಕಲನ್ನು ನಿಡಿ–5 ಎಂದು, ಪೋಡಿ ನಕ್ಷೆಯ ಧೃಡೀಕೃತ ನಕಲನ್ನು ನಿಡಿ–6 ಎಂದು, ಸಾಗುವಳಿ ಚೀಟಿಯ ಧೃಡೀಕೃತ ನಕಲನ್ನು ನಿಡಿ–7 ಎಂದು, ದಿನಾಂಕ 12.02.1988 ರ ಅಧಿಕೃತ ಜ್ಞಾಪನದ ಧೃಡೀಕೃತ ನಕಲನ್ನು ನಿಡಿ–8 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.